| | |
|---|---|
| **ಪ್ರಧಾನ ಹಿರಿಯ ದಿವಾಣಿ ನ್ಯಾಯಾಲಯ ಮತ್ತು ಜೆ.ಎಮ್.ಎಫ್.ಸಿ ಜಮಖಂಡಿ.** | |
| ಸಿ.ಸಿ. ನಂ.**1/2021** | |
| ಚಾಸಾ - **23** | |
| ಪ್ರಾಸಾ - **20** | |
| ಸಾಕ್ಷಿದಾರರ ಹೆಸರು | ಪರಶುರಾಮ ಮನಗೂಳಿ |
| ತಂದೆ/ಗಂಡ/ತಾಯಿ ಹೆಸರು | ನಿಂಗಪ್ಪ |
| ವಯಸ್ಸು | **38** ವರ್ಷ |
| ಉದ್ಯೋಗ | ಪಿ.ಎಸ್.ಐ. ಜಮಖಂಡಿ ಗ್ರಾಮೀಣ ಪೋಲೀಸ ಠಾಣೆ ಅಪರಾಧ ವಿಭಾಗ. |
| ವಾಸಸ್ಥಳ | ಜಮಖಂಡಿ. |

**ಸಾಕ್ಷಿಯನ್ನು ದಿನಾಂಕಃ-01.03.2024 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ-ಸ.ಸ.ಅ ರವರಿಂದಃ-**

ನಾನು ದಿನಾಂಕ 05.09.2016 ರಿಂದ 03.08.2018 ರವರೆಗೆ ಜಮಖಂಡಿ ನಗರ ಠಾಣೆಯಲ್ಲಿ ಪಿ.ಎಸ್.ಐ ಎಂದು ಕರ್ತವ್ಯ ನಿರ್ವಹಿಸಿದ್ದೇನೆ. ದಿನಾಂಕ 03.03.2018 ರಂದು ಸಾಯಂಕಾಲ 5-30 ಗಂಟೆಗೆ ನಾನು ಠಾಣೆಯಲ್ಲಿದ್ದಾಗ ಚಾಸಾ-1 ರವರು ಠಾಣೆಗೆ ಹಾಜರಾಗಿ ಪ್ರಥಮ ವತರ್ಮಾನ ಹೇಳಿಕೆಯನ್ನು ನೀಡಿದ್ದು, ಅದನ್ನು ಸ್ವೀಕರಿಸಿ ನಮ್ಮ ಠಾಣೆಯ ಪ್ರಕರಣ ಸಂಖ್ಯೆ 37/2018 ರಲ್ಲಿ ದಾಖಲಿಸಿಕೊಂಡು ಪ್ರಥಮ ವತರ್ಮಾನ ವರದಿಯನ್ನು ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿದ್ದೇನೆ. ಪ್ರಥಮ ವರ್ತಮಾನ ಹೇಳಿಕೆಯನ್ನು ನಿಪಿ-30 ಎಂದು, ಸಾಕ್ಷಿಯ ಸಹಿಯನ್ನು ನಿಪಿ-30(ಎ) ಎಂದು ಗುರುತಿಸಲಾಯಿತು. ಪ್ರಥಮ ವರ್ತಮಾನ ವರದಿಯನ್ನು ನಿಪಿ-31 ಎಂದು, ಸಾಕ್ಷಿಯ ಸಹಿ ನಿಪಿ-31(ಎ) ಎಂದು ಗುರುತಿಸಲಾಯಿತು.

ದಿನಾಂಕ 15.03.2018 ರಂದು ಸಾಕ್ಷಿದಾರರಾದ ಚಾಸಾ-4 ರವರು ಆರೋಪಿ ಕುಳಿತುಕೊಳ್ಳುವ ಜಾಗೆಯನ್ನು ತೋರಿಸಿದ್ದರ ಮೇರೆಗೆ ಸಾಕ್ಷಿದಾರರ ಸಮಕ್ಷಮದಲ್ಲಿ ಸ್ಥಳ ಮಹಜರ ಮಾಡಿದ್ದೇನೆ. ಸ್ಥಳ ಮಹಜರನ್ನು 10-00 ಗಂಟೆಯಿಂದ 11-00 ಗಂಟೆಯವರೆಗೆ ಮಾಡಿದ್ದೇನೆ. ಸದರಿ ಸ್ಥಳ ಮಹಜರನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿಪಿ-1(ಸಿ) ಎಂದು ಗುರುತಿಸಲಾಯಿತು. ಅದೇ ದಿನ ಚಾಸಾ-6 ರಿಂದ ಚಾಸಾ-15 ರವರ ಹೇಳಿಕೆಗಳನ್ನು ಪಡೆದುಕೊಂಡಿದ್ದೇನೆ. ನಂತರ ದಿನಾಂಕ 23.03.2018 ರಂದು ಎಸ್.ಬಿ.ಐ ಜಮಖಂಡಿಯವರಿಂದ ಚಾಸಾ-6 ರಿಂದ ಚಾಸಾ-15 ರವರ ಖಾತೆಗೆ ಸಂಬಂಧಪಟ್ಟಂತಹ ಸ್ಟೇಟ್‌ಮೆಂಟನ್ನು ಚಾಸಾ-1 ರವರಿಂದ ಪಡೆದುಕೊಂಡಿದ್ದೇನೆ. ದಿನಾಂಕ 28.06.2018 ರಂದು

ಚಾಸಾ-1 ರವರ ಠಾಣೆಗೆ ಹಾಜರಾಗಿದ್ದರ ಮೇರೆಗೆ ಸದರಿಯವರ ಮರುಹೇಳಿಕೆ ಪಡೆದುಕೊಂಡಿದ್ದೇನೆ.

ನಂತರ ದಿನಾಂಕ 29.06.2018 ರಂದು ಚಾಸಾ-4 ರವರ ಹೇಳಿಕೆ ಪಡೆದುಕೊಂಡಿದ್ದೇನೆ. ಅದೇ ದಿನ ಚಾಸಾ-22 ಮತ್ತು ಪಿ.ಸಿ. 1119 ರವರು ಆರೋಪಿಯನ್ನು ತಂದು ಹಾಜರು ಪಡಿಸಿದ್ದರ ಮೇರೆಗೆ ದಸ್ತಗೀರ ಕ್ರಮ ಅನುಸರಿಸಿ ಆರೋಪಿತನ ಮಾದರಿ ಸಹಿಗಳನ್ನು ಪಡೆದುಕೊಂಡಿದ್ದೇನೆ. ದಸ್ತಗೀರ ಕ್ರಮ ಅನುಸರಿಸಿ ಆರೋಪಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ. ದಿನಾಂಕ 30.06.2018 ರಂದು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಯಿಂದ ಆರೋಪಿಗೆ ಸಂಬಂಧಪಟ್ಟಂತಹ ಕರ್ತವ್ಯದ ಆದೇಶದ ಪ್ರತಿ, ಸೇವಾ ವಿವರ, ಪರಿಶೀಲನೆ ಧೃಢೀಕರಣ ಪತ್ರ ಮತ್ತು ಹಾಜರಾತಿ ಧೃಢೀಕರಣ ಪತ್ರ, ಜುಲೈ-2017 ರ ವೇತನ ಬಿಲ್ಲು, ಜನವರಿ-2018 ರ ವೇತನ ಬಿಲ್ಲು ಮತ್ತು ವೇತನ ಬಿಲ್ಲಿನ ಪ್ರತಿ, ಪಾಸ ಬುಕ್ ಧೃಢೀಕರಣ ಪ್ರತಿಗಳನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿದ್ದೇನೆ. ಆರೋಪಿತನಿಗೆ ಸಂಬಂಧಪಟ್ಟ ಕರ್ತವ್ಯದ ವಿವರದ ಪತ್ರ, ನೇಮಕಾತಿ ಆದೇಶದ ಧೃಢೀಕೃತ ನಕಲು, ಸೇವಾ ಪುಸ್ತಕದ ಒಂದು ಪುಟದ ಧೃಢೀಕೃತ ನಕಲು, ಹಾಜರಾತಿ ಪುಸ್ತಕದ 2 ಪುಟಗಳ ಧೃಢೀಕೃತ ನಕಲು, ಆರೋಪಿತನ ಕೈಬರಹದ 3 ಪುಟಗಳ ಧೃಢೀಕೃತ ನಕಲು, ಪಾಸ ಪುಸ್ತಕದ 3 ಪುಟಗಳ ಧೃಢೀಕೃತ ನಕಲು, 2 ಚಲನಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ-4 ರಿಂದ ನಿಪಿ-9 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಗಳನ್ನು ನಿಪಿ-4(ಬಿ), ನಿಪಿ-5(ಎ), ನಿಪಿ-6(ಎ), ನಿಪಿ-7(ಎ), ನಿಪಿ-8(ಎ), ನಿಪಿ-9(ಎ) ಎಂದು ಗುರುತಿಸಲಾಯಿತು.

ದಿನಾಂಕ 03.07.2018 ರಂದು ಉಪಖಜಾನೆಯವರು ಹಾಜರು ಪಡಿಸಿದಂತಹ ಬಿಲ್‌ಟೋಕನ್ ನಂಬರಿಗೆ ಸಂಬಂಧಟ್ಟಂತಹ ಬಿಲ್ಲು ಹಾಜರು ಪಡಿಸಿದ ಚೀಟಿ ಮತ್ತು ಇನ್ನೊಂದು ಚೀಟಿಯನ್ನು ಪಿ.ಸಿ.1567 ಇವರು ಹಾಜರು ಪಡಿಸಿದ್ದನ್ನು, ಪಂಚರ ಸಮಕ್ಷಮ ಅಮಾನತ್ತು ಪಡಿಸಿಕೊಂಡಿದ್ದೇನೆ. ಸದರಿ ಅಮಾನತ್ತು ಮಹಜರನ್ನು ನಿಪಿ-32 ಎಂದು, ಸಾಕ್ಷಿಯ ಸಹಿಯನ್ನು ನಿಪಿ-32(ಎ) ಎಂದು ಗುರುತಿಸಲಾಯಿತು. ದಿನಾಂಕ 02.07.2018 ರ ಉಪಖಜಾನೆಯವರು ಬರೆದ ಪತ್ರವನ್ನು ನಿಪಿ-33 ಎಂದು, ಸಾಕ್ಷಿಯ ಸಹಿಯನ್ನು ನಿಪಿ-33(ಎ) ಎಂದು ಗುರುತಿಸಲಾಯಿತು. ದಿನಾಂಕ 07.09.2018 ರಂದು ನನಗೆ ವರ್ಗಾವಣೆಗೊಂಡಿದ್ದರಿಂದ ಚಾಸಾ-24 ರವರಿಗೆ ಮುಂದಿನ ತನಿಖೆಯನ್ನು ವಹಿಸಿಕೊಟ್ಟಿದ್ದೇನೆ.

**<u>ಪಾಟೀ ಸವಾಲು ಆರೋಪಿತರ ಪರ ಶ್ರೀ.ಡಿ.ಡಿ.ಜೆ. ವಕೀಲರಿಂದಃ-</u>**

ಚಾಸಾ-1 ರವರು ಪ್ರಥಮ ವರ್ತಮಾನ ಹೇಳಿಕೆಯನ್ನು ಕೊಡುವಾಗ ಯಾವುದೇ ದಾಖಲಾತಿಗಳನುನ ಕೊಟ್ಟಿರುವುದಿಲ್ಲ. ಪ್ರಥಮ ವರ್ತಮಾನ ಹೇಳಿಕೆಯಲ್ಲಿ ನಮೂದಿಸಿರುವ ಶಿಕ್ಷಕರು ನಮ್ಮ ಬಳಿ ಬಂದು ಅಥವಾ ಚಾಸಾ-1 ಇವರಿಗೆ ದೂರು ಕೊಟ್ಟಿಲ್ಲ. ಚಾಸಾ-1 ರವರು ಶಿಕ್ಷಕರು ತಮಗೆ ದೂರು ಕೊಟ್ಟಿದ್ದರ ಬಗ್ಗೆ ನನಗೆ ದಾಖಲಾತಿಗಳನ್ನು ಕೊಟ್ಟಿಲ್ಲ. ಎಲ್ಲಾ ಬಿಲ್ಲುಗಳಿಗೆ ಚಾಸಾ-1 ರವರ ಸಹಿಗಳು ಇವೆ ಎಂದರೆ ಸರಿ. ಬಿ.ಇ.ಓ ಇವರು ಯಾವುದೇ ದಾಖಲಾತಿಗೆ ಸಹಿ ಹಾಕಬೇಕಾದರೆ ಪರಿಶೀಲನೆ ಮಾಡುತ್ತಾರೆ ಎಂದರೆ ಸಾಕ್ಷಿಯು ಕೆಲಸದ ಒತ್ತಡದಲ್ಲಿ ಮೋಸ ಮಾಡಿ ಸಹಿ ತೆಗೆದುಕೊಂಡಿದ್ದಾರೆ ಎಂದು ಮರುಹೇಳಿಕೆಯಲ್ಲಿ ಚಾಸಾ-1 ರವರು ಹೇಳಿದ್ದಾರೆ. ಆ ರೀತಿ ನಿಪಿ-30 ರಲ್ಲಿ ಚಾಸಾ-1 ರವರು ನಮೂದಿಸಿರುವುದಿಲ್ಲ. ಆರೋಪಿ, ಚಾಸಾ-1 ರವರ ಸಹಿ ಇಲ್ಲದಂತಹ ದಾಖಲಾತಿಗಳನ್ನು ಯಾವುದನ್ನೂ ಉಪಖಜಾನೆಗೆ ಹಾಜರು ಪಡಿಸಿಲ್ಲ ಎಂದರೆ ಸರಿ. ಉಪಖಜಾನೆಯವರು ಪರಿಶೀಲನೆ ಮಾಡಿ ಬಿಲ್ಲು ಮಾಡುತ್ತಾರೆ ಎಂದರೆ ಸರಿ, ಸಾಕ್ಷಿ ಮುಂದುವರೆದು ಮೋಸದಿಂದ ಸಹಿ ತೆಗೆದುಕೊಂಡು ಕಳುಹಿಸಿದ್ದಾರೆ ಎಂದು ಹೇಳತ್ತಾರೆ. ಉಪಖಜಾನೆ ಅಧಿಕಾರಿಯವರ ಹೇಳಿಕೆಯನ್ನು ಪಡೆದುಕೊಂಡಿಲ್ಲ. ಉಪಖಜಾನೆಯವರು ಹಾಜರು ಪಡಿಸಿದಂತಹ ದಾಖಲಾತಿಗಳು ಮತ್ತು ಚಾಸಾ-1 ರವರು ಹಾಜರು ಪಡಿಸಿದಂತಹ ದಾಖಲಾತಿಗಳು ಒಂದೇ ರೀತಿಯಾಗಿವೆ ಎಂದರೆ ಸಾಕ್ಷಿಯು ಇರಬಹುದು ಎಂದು ಹೇಳುತ್ತಾರೆ. ಚಾಸಾ-1 ರವರಿಗೆ ಸಂಬಂಧಪಟ್ಟ ಕಚೇರಿಯಲ್ಲಿ ಆವಕ-ಜಾವಕ ರಜಿಸ್ಟರನ್ನು ವಶಪಡಿಸಿಕೊಂಡಿಲ್ಲ. ಶಿಕ್ಷಕರು ತಾವು ಯಾವುದೇ ಅರ್ಜಿಯನ್ನು ಕೊಟ್ಟಿಲ್ಲ ಎಂದು ಅಥವಾ ಕೊಟ್ಟಿದ್ದರ ಬಗ್ಗೆ ನನ್ನ ಮುಂದೆ ಹೇಳಿಲ್ಲ ಎಂದರೆ ಸರಿ.

ಶಿಕ್ಷಕರ, ಅವರವರ ಖಾತೆಗೆ ಹಣ ಜಮೆ ಆಗಿದೆ ಎಂದರೆ ಸಾಕ್ಷಿಯು ಹೆಚ್ಚುವರಿಯಾಗಿ ಜಮೆ ಮಾಡಿದ್ದಾರೆ ಎಂದು ಹೇಳುತ್ತಾರೆ. ಹೆಚ್ಚುವರಿಯಾಗಿ ಜಮೆ ಮಾಡಿದ್ದಾರೆಂದು ನಿಪಿ-30 ರಲ್ಲಿ ಹೇಳಿಲ್ಲ ಎಂದರೆ ಸರಿ. ನಿಪಿ-30 ರಲ್ಲಿ ಹೇಳಿದಂತಹ ಶಿಕ್ಷಕರ ಖಾತೆಗೆ ಹಣ ಜಮೆ ಆಗಿದೆ ಎಂದರೆ ಸರಿ. ಶಿಕ್ಷಕರು ತಪ್ಪಾಗಿ ತಮ್ಮ ಖಾತೆಗೆ ಜಮೆ ಆಗಿದ್ದು, ಅವುಗಳನ್ನು ಮರಳಿ ಆರೋಪಿಗೆ ಕೊಟ್ಟಿದ್ದೇವೆ ಎಂದು ಚಾಸಾ-1 ರವರ ಕಚೇರಿಗೆ ಲಿಖಿತವಾಗಿ ಕೊಟ್ಟಿದ್ದರ ಬಗ್ಗೆ ನನಗೆ ಮಾಹಿತಿ ಇಲ್ಲ. ಆ ವಿಷಯವಾಗಿ ಚಾಸಾ-1 ರವರ ಕಚೇರಿಗೆ ಲಿಖಿತವಾಗಿ ಕೊಟ್ಟಿದ್ದರ ಬಗ್ಗೆ ಶಿಕ್ಷಕರನ್ನು ವಿಚಾರಣೆ ಮಾಡಿಲ್ಲ. ಶಿಕ್ಷಕರು ಕೊಟ್ಟಂತಹ ಹೇಳಿಕೆಯ ಪ್ರಕಾರ ಚಾಸಾ-1 ರವರನ್ನು

ವಿಚಾರಿಸಿದ್ದೀರಾ ಎಂದರೆ ಸಾಕ್ಷಿಯು ನಿಪಿ-30 ನಮೂದಿಸಿದ್ದಾರೆ ಎಂದು ಹೇಳುತ್ತಾರೆ. ಈ ಕೇಸಿನಲ್ಲಿ ಯಾವುದೇ ಅವ್ಯವಹಾರ ಆಗಿಲ್ಲ, ಚಾಸಾ-1 ರವರು ಪರಿಶೀಲನೆ ಮಾಡಿ ಸಹಿ ಹಾಕಿದ ನಂತರ ಬಿಲ್ಲುಗಳು ಅವರವರ ಖಾತೆಗೆ ಜಮೆ ಆಗಿದೆ ಎಂದರೆ ಸರಿಯಲ್ಲ. ಶಿಕ್ಷಕರು ಯಾವ ದಿನಾಂಕದಂದು ಯಾರ ಸಮಕ್ಷಮದಲ್ಲಿ ಆರೋಪಿಗೆ ಹಣ ಕೊಟ್ಟಿದ್ದೇವೆ ಎಂದು ಶಿಕ್ಷಕರು ಹೇಳಿಲ್ಲ ಎಂದರೆ ಸಾಕ್ಷಿಯು ಕೊಟ್ಟಿದ್ದೇವೆ ಎಂದು ಮಾತ್ರ ಹೇಳಿದ್ದೇವೆ ಎಂದು ಹೇಳುತ್ತಾರೆ. ಚಾಸಾ-6 ರಿಂದ ಚಾಸಾ-15 ರವರು ನನ್ನ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ ಅನ್ನುವುದು ಸರಿಯಲ್ಲ.

ಸ್ಥಳ ಮಹಜರಕ್ಕೆ ಸಾರ್ವಜನಿಕ ವ್ಯಕ್ತಿಗಳನ್ನು ಕರೆದು ಸ್ಥಳ ಮಹಜರ ಮಾಡಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ಸದರಿ ಕೇಸಿನ ಬಗ್ಗೆ ಮಾಹಿತಿ ಇರುವವರನ್ನು ಮಹಜರ ಸಾಕ್ಷಿದಾರರನ್ನಾಗಿ ಕರೆದಿದ್ದೇವೆ ಎಂದು ಹೇಳುತ್ತಾರೆ. ನಿಪಿ-1 ನ್ನು ಚಾಸಾ-1 ರವರ ಕಚೇರಿಗೆ ಸಾಕ್ಷಿದಾರರ ಸಮಕ್ಷಮ ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಪೋಲೀಸ ಠಾಣೆಯಲ್ಲಿಯೇ ನಿಪಿ-1 ನ್ನು ತಯಾರಿಸಿದ್ದು, ಚಾಸಾ-1 ರವರ ಕಚೇರಿಗೆ ಹೋಗಿಲ್ಲ ಅನ್ನುವುದು ಸರಿಯಲ್ಲ. ಆರೋಪಿತನಿಗೆ ವಹಿಸಿದಂತಹ ಕೆಲಸದ ಆದೇಶದ ಪ್ರತಿಯನ್ನು ಪಡೆದುಕೊಂಡಿದ್ದೇನೆ. ನಿಪಿ-4 ನ್ನು ದಿನಾಂಕ 30.06.2018 ರಂದು ಸೃಷ್ಟಿ ಮಾಡಿ ಕೊಟ್ಟಂತಹ ದಾಖಲಾತಿ ಎಂದರೆ ಸರಿಯಲ್ಲ. ಆರೋಪಿಯನ್ನು ಯಾವ ಕೆಲಸಕ್ಕೆ ಯಾವ ದಿನಾಂಕದಂದು ಯಾವ ಅಧಿಕಾರಿ ನಿಯೋಜಿಸಿದ್ದಾರೆ ಎಂದು ಹೇಳುವ ದಾಖಲಾತಿಯನ್ನು ಪಡೆದುಕೊಂಡಿಲ್ಲ. ಬ್ಯಾಂಕಿನವರು ಕೊಟ್ಟಂತಹ ಸ್ಟೇಟಮೆಂಟ್ ಪ್ರಕಾರ ಆಯಾ ಶಿಕ್ಷಕರ ಖಾತೆಗೆ ಹಣ ಜಮೆಯಾಗಿದೆ ಎಂದರೆ ಸರಿ. ಎಲ್ಲಾ ದಾಖಲಾತಿಗಳು ಸರಿಯಾಗಿದ್ದು, ಆರೋಪಿಯು ಯಾವುದೇ ದಾಖಲಾತಿಗಳನ್ನು ಸೃಷ್ಟಿ ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ಸಿಬ್ಬಂದಿಯವರ ಮಾತನ್ನು ಕೇಳಿ ಚಾಸಾ-1 ರವರು ತಾವು ಮಾಡಿದ ತಪ್ಪನ್ನು ಆರೋಪಿಯ ಮೇಲೆ ಹಾಕಿದ್ದಾರೆ ಎಂದರೆ ಸರಿಯಲ್ಲ. ಚಾಸಾ-1 ರವರ ಆದೇಶದ ಮೇರೆಗೆ ಆರೋಪಿ ಬಿಲ್ಲುಗಳನ್ನು ತಯಾರಿಸಿದ್ದಾರೆ ಎಂದರೆ ಸರಿಯಲ್ಲ. ಎಲ್ಲ ಶಿಕ್ಷಕರು, ಚಾಸಾ-1 ರವರು ಮೇಲಾಧಿಕಾರಿಯರಾಗಿದ್ದರಿಂದ ಅವರ ಮಾತನ್ನು ಕೇಳಿ ಸುಳ್ಳು ಕೇಸನ್ನು ದಾಖಲಿಸಿದ್ದಾರೆ ಎಂದರೆ ಸರಿಯಲ್ಲ. ಆರೋಪಿಯ ಮೇಲೆ ಸುಳ್ಳು ಕೇಸನ್ನು ದಾಖಲಿಸಿದ್ದು, ಅದಕ್ಕೆ ಅನುಗುಣವಾಗಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ದಾಖಲಾತಿಗಳನ್ನು ವಶಪಡಿಸಿಕೊಂಡಿಲ್ಲ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ. ಸರಿ ಅದೆ.

ಸಹಿ/-

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಮ್.ಎಫ್.ಸಿ. ಜಮಖಂಡಿ.

ಸಾಕ್ಷಿಯ ಸಹಿ

| ಪ್ರಧಾನ ಹಿರಿಯ ದಿವಾಣಿ ನ್ಯಾಯಾಲಯ ಮತ್ತು ಜೆ.ಎಮ್.ಎಫ್.ಸಿ ಜಮಖಂಡಿ. | |
|---|---|
| ಸಿ.ಸಿ. ನಂ.**1/2021** | |
| ಚಾಸಾ - **24** | |
| ಪ್ರಾಸಾ - **21** | |
| ಸಾಕ್ಷಿದಾರರ ಹೆಸರು | ದಿನೇಶ ಜವಳಕರ |
| ತಂದೆ/ಗಂಡ/ತಾಯಿ ಹೆಸರು | ಪಾಂಡುರಂಗ |
| ವಯಸ್ಸು | **40** ವರ್ಷ |
| ಉದ್ಯೋಗ | ಪಿ.ಎಸ್.ಐ ಹೆಸ್ಕಾಂ ವಿಜಿಲೆನ್ಸ ಹುಬ್ಬಳ್ಳಿ |
| ವಾಸಸ್ಥಳ | ಹುಬ್ಬಳ್ಳಿ. |

ಸಾಕ್ಷಿಯನ್ನು ದಿನಾಂಕಃ**-01.03.2024** ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ-ಸ.ಸ.ಅ ರವರಿಂದಃ-

ನಾನು ದಿನಾಂಕ 04.09.2018 ರಿಂದ 10.10.2019 ರವರೆಗೆ ಜಮಖಂಡಿ ನಗರ ಠಾಣೆಯಲ್ಲಿ ಪಿ.ಎಸ್.ಐ ಎಂದು ಕರ್ತವ್ಯ ನಿರ್ವಹಿಸಿದ್ದೇನೆ. ದಿನಾಂಕ 07.09.2018 ರಂದು ಪ್ರಕರಣದ ಮುಂದಿನ ತನಿಖೆಯನ್ನು ಚಾಸಾ-23 ರವರಿಂದ ವಹಿಸಿಕೊಂಡಿದ್ದೇನೆ. ದಿನಾಂಕ 08.10.2018 ರಂದು ಚಾಸಾ-1 ರವರು ವೇತನ ಬಡ್ತಿ ಪುರವಣಿ, ವೇತನ ವಿತರಣಾ ಪಟ್ಟಿಯನ್ನು ನೀಡಿದ್ದು, ಅದನ್ನು ಕಡತಕ್ಕೆ ಅಳವಡಿಸಿಕೊಂಡಿದ್ದೇನೆ. ಸದರಿ ದಾಖಲಾತಿಯನ್ನು ನಿಪಿ-34 ಎಂದು ಸಾಕ್ಷಿಯ ಸಹಿಯನ್ನು ನಿಪಿ-34(ಎ) ಎಂದು ಗುರುತಿಸಲಾಯಿತು. ಅದೇ ದಿನ ಆರೋಪಿಯು ಚಾಸಾ-1 ರವರಿಗೆ ನೀಡಿದ ವಿವರಣಾ ಪತ್ರವನ್ನು ಸ್ವೀಕರಿಸಿದ್ದೇನೆ. ಸದರಿ ವಿವರಣಾ ಪತ್ರವನ್ನು ನಿಪಿ-35 ಎಂದು ಸಾಕ್ಷಿಯ ಸಹಿಯನ್ನು ನಿಪಿ-35(ಎ) ಎಂದು ಗುರುತಿಸಲಾಯಿತು. ದಿನಾಂಕ 03.07.2019 ರಂದು ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಇವರು ಆರೋಪಿಯ ವಿರುದ್ಧ ಶಿಸ್ತು ಕ್ರಮ ತೆಗೆದುಕೊಂಡು ಅಮಾನತ್ತು ಪಡಿಸಿದ್ದರ ಆದೇಶದ ಪ್ರತಿಯನ್ನು ಕಳುಹಿಸಿದ್ದು, ಅದನ್ನು ಸ್ವೀಕರಿಸಿದ್ದೇನೆ. ಸದರಿ ದಾಖಲಾತಿಯನ್ನು ನಿಪಿ-36 ಎಂದು ಸಾಕ್ಷಿಯ ಸಹಿಯನ್ನು ನಿಪಿ-36(ಎ) ಎಂದು ಗುರುತಿಸಲಾಯಿತು. ದಿನಾಂಕ 16.08.2019 ರಂದು ಸಹ ನಿರ್ದೇಶಕರು, ಆಯುಕ್ತರು, ಶಿಕ್ಷಣ ಇಲಾಖೆ ಇವರಿಗೆ ಆರೋಪಿಯ ವಿರುದ್ಧ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಲು ಪತ್ರವನ್ನು ಬರೆದಿದ್ದೇನೆ. ಸದರಿ ಪತ್ರವನ್ನು ನಿಪಿ-37 ಎಂದು ಸಾಕ್ಷಿಯ ಸಹಿಯನ್ನು ನಿಪಿ-37(ಎ) ಎಂದು ಗುರುತಿಸಲಾಯಿತು. ದಿನಾಂಕ 11.09.2019 ಸಹ ನಿರ್ದೇಶಕರು, ಆಯುಕ್ತರು, ಶಿಕ್ಷಣ ಇಲಾಖೆ ಇವರಿಗೆ ಆರೋಪಿಯ ವಿರುದ್ಧ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಲು ಅನುಮತಿ ನೀಡಿರುತ್ತಾರೆ. ಸದರಿ ಅನುಮತಿ ಪತ್ರವನ್ನು ಈಗಾಗಲೇ ನಿಪಿ-23 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-23(ಬಿ) ಎಂದು ಗುರುತಿಸಲಾಯಿತು. ದಿನಾಂಕ

10.10.2019 ರಂದು ನನಗೆ ವರ್ಗಾವಣೆಗೊಂಡಿದ್ದರಿಂದ ಮುಂದಿನ ತನಿಖೆಯನ್ನು ಚಾಸಾ-20 ರವರಿಗೆ ವಹಿಸಿಕೊಟ್ಟಿದ್ದೇನೆ.

**ಪಾಟೀ ಸವಾಲುಃ- ಆರೋಪಿ ಪರ ಶ್ರೀ.ಡಿ.ಡಿ.ಜೆ ವಕೀಲರಿಂದಃ-**

ಕ್ಷೇತ್ರ ಶಿಕ್ಷಣಾಧಿಕಾರಿಯವರು ಕೊಟ್ಟಂತಹ ದಾಖಲಾತಿಗಳನ್ನು ಪಂಚರ ಸಮಕ್ಷಮ ವಶಪಡಿಸಿಕೊಂಡಿಲ್ಲ ಎಂದರೆ ಸರಿ. ನಾನು, ಸಹ ನಿರ್ದೇಶಕರು, ಆಯುಕ್ತರು, ಶಿಕ್ಷಣ ಇಲಾಖೆ ಇವರಿಗೆ ಆರೋಪಿಯ ವಿರುದ್ಧ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಲು ಅನುಮತಿ ಪಡೆದುಕೊಂಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ದಾಖಲಾತಿಗಳನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ನಿಪಿ-34 ರಲ್ಲಿ ಚಾಸಾ-1 ರವರ ಸಹಿ ಇಲ್ಲ ಎಂದರೆ ಸಾಕ್ಷಿಯು ಆ ಸಮಯದಲ್ಲಿ ಬೇರೆ ಕ್ಷೇತ್ರ ಶಿಕ್ಷಣಾಧಿಕಾರಿಗಳು ಇದ್ದರು ಎಂದು ಹೇಳುತ್ತಾರೆ. ದಾಖಲಾತಿಗಳನ್ನು ಹಾಜರು ಪಡಿಸಿದಂತಹ ಕ್ಷೇತ್ರ ಶಿಕ್ಷಣಾಧಿಕಾರಿಯವರ ಹೇಳಿಕೆಯನ್ನು ಪಡೆದುಕೊಂಡಿಲ್ಲ ಎಂದರೆ ಸರಿ. ನಾನು ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಲು ಅನುಮತಿ ಪಡೆದುಕೊಂಡಿದ್ದೇನೆ ಮತ್ತು ದಾಖಲಾತಿಗಳನ್ನು ಪಡೆದುಕೊಂಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕೇತ್ರ ಶಿಕ್ಷಣಾಧಿಕಾರಿಯವರು ಯಾವುದೇ ದಾಖಲಾತಿಗಳನ್ನು ಹಾಜರು ಪಡಿಸಿಲ್ಲ ಅನ್ನುವುದು ಸರಿಯಲ್ಲ. ಆರೋಪಿಯು ಯಾವುದೇ ತಪ್ಪು ಮಾಡಿರುವ ಬಗ್ಗೆ ಯಾವುದೇ ಸಾಕ್ಷ್ಯಾಧಾರಗಳು ಇಲ್ಲದಿದ್ದರೂ ಸಹ ಚಾಸಾ-1 ರವರು ಮಾಡಿದಂತಹ ತಪ್ಪನ್ನು ಮುಚ್ಚಿಹಾಕುವ ಉದ್ದೇಶದಿಂದ, ಚಾಸಾ-1 ರವರಿಗೆ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಯಾವುದೇ ತಪ್ಪು ಮಾಡಿಲ್ಲ ಅನ್ನುವುದು ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ. ಸರಿ ಅದೆ.

ಸಹಿ/-

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಮ್.ಎಫ್.ಸಿ. ಜಮಖಂಡಿ.

ಸಾಕ್ಷಿಯ ಸಹಿ